# ಪ್ರಾರ್ಥನೆ

## ಯಮುನಾಷ್ಟಕಮ್ - ೧

**ಕೃಪಾಪಾರಾವಾರಾಂ ತಪನತನಯಾಂ ತಾಪಶಮನೀಂ**
**ಮುರಾರಿಪ್ರೇಯಸ್ಯಾಂ ಭವಭಯದವಾಂ ಭಕ್ತಿವರದಾಮ್।**
**ವಿಯಜ್ಜ್ವಾಲೋನ್ಮುಕ್ತಾಂ ಶ್ರಿಯಮಪಿ ಸುಖಾಪ್ತೇಃ ಪರಿದಿನಂ**
**ಸದಾ ಧೀರೋ ನೂನಂ ಭಜತಿ ಯಮುನಾಂ ನಿತ್ಯಫಲದಾಮ್ ॥೧॥**

ನಿತ್ಯವಾದ ಫಲಗಳನ್ನು ಕರುಣಿಸುವ ಯಮುನೆಯನ್ನು ಧೀರನು ಸದಾ ಭಜಿಸುತ್ತಾನೆ. ಆಕೆಯು ಕರುಣೆಯ ಕಡಲು, ಸೂರ್ಯನ ಮಗಳು, ಎಲ್ಲಾ ರೀತಿಯ ಪಾಪಗಳನ್ನು ನಿವಾರಿಸುವವಳು, ಮುರಾರಿಗೆ ಪ್ರೀತಪಾತ್ರಳು, ಭವ ಭಯಕ್ಕೆ ದಾವಾಗ್ನಿಯಂತಿರುವವಳು, ಭಕ್ತಿ ವರವನ್ನು ಕರುಣಿಸುವವಳು, ಆಕಾಶ ಜ್ವಾಲೆಯಿಂದ ಪ್ರಕಟಗೊಂಡವಳು. ಸುಖವನ್ನು ಹೊಂದಲು ಅಗತ್ಯವಾದ ಐಶ್ವರ್ಯ ಸ್ವರೂಪಿಣಿ ಅವಳು.

**ಮಧುವನಚಾರಿಣಿ ಭಾಸ್ಕರವಾಹಿನಿ ಜಾಹ್ನವಿಸಂಗಿನಿ ಸಿಂಧುಸುತೇ**
**ಮಧುರಿಪುಭೂಷಣಿ ಮಾಧವತೋಷಿಣಿ ಗೋಕುಲಭೀತಿವಿನಾಶಕೃತೇ।**
**ಜಗದಘಮೋಚನಿ ಮಾನಸದಾಯಿನಿ ಕೇಶವಕೇಲಿನಿದಾನಗತೇ**
**ಜಯ ಯಮುನೇ ಜಯ ಭೀತಿನಿವಾರಿಣಿ ಸಂಕಟನಾಶಿನಿ ಪಾವಯ ಮಾಮ್ ॥೨॥**

ಮಧುವನದಲ್ಲಿ ಸಂಚರಿಸುವ, ಸೂರ್ಯನ ಚಲನೆಗೆ ಸಹಕಾರಿಣಿಯಾದ, ಗಂಗೆಯ ಸ್ನೇಹಿತೆಯೂ ಸಮುದ್ರದ ಮಗಳೂ ಆದ, ಶ್ರೀವಿಷ್ಣುವಿಗೆ ಆಭರಣವಾರುವ, ಕೃಷ್ಣನಿಗೆ ಆನಂದವನ್ನು ನೀಡುವ, ಗೋಕುಲದ ಭಯವನ್ನು ನಿವಾರಣೆ ಮಾಡಿದ, ಜಗತ್ತನ್ನು ಪಾಪದಿಂದ ಬಿಡಿಸುವ, ಜನರ ಮನಸ್ಸಿನ ಅಭಿಲಾಷೆಗಳನ್ನು ಪೂರೈಸುವ, ಕೇಶವನು ಲೀಲಾವಿನೋದಗಳನ್ನಾಚರಿಸಲು ಸಹಕರಿಸಿದ ಯಮುನೆ, ನಿನಗೆ ಜಯವಾಗಲಿ. ಭಯನಾಶಿನಿ, ಸಂಕಟನಾಶಿನಿ - ನನ್ನನ್ನು ಪಾವನಗೊಳಿಸು.

**ಅತಿಮಧುರೇ ಮಧುಮೋದವಿಲಾಸಿನಿ ಶೈಲವಿದಾರಿಣಿ ವೇಗಪರೇ**
**ಪರಿಜನಪಾಲಿನಿ ದುಷ್ಟನಿಷೂದಿನಿ ವಾಂಛಿತಕಾಮವಿಲಾಸಧರೇ।**
**ವ್ರಜಪುರವಾಸಿಜನಾರ್ಜಿತಪಾತಕಹಾರಿಣಿ ವಿಶ್ವಜನೋದ್ಧರಿಕೇ**
**ಜಯ ಯಮುನೇ ಜಯ ಭೀತಿನಿವಾರಿಣಿ ಸಂಕಟನಾಶಿನಿ ಪಾವಯ ಮಾಮ್ ॥೩॥**

ಮಧುರಳಾದ, ಮಧುವಿನ ಆನಂದದಿಂದ ಆನಂದಿಸುವ ಪರ್ವತ ಗಳನ್ನು ಸೀಳಿ ಭೋರ್ಗರೆಯುತ್ತಾ ವೇಗದಿಂದ ಹರಿಯುವ, ತನ್ನನ್ನು ಸೇವಿಸುವವರನ್ನು ಪಾಲಿಸುವ, ದುಷ್ಟರನ್ನು ನಾಶಮಾಡುವ, ಇಚ್ಛಾನು ಸಾರಿ ರೂಪಧರಿಸುವ, ಗೋಕುಲದ ಜನರು ಗಳಿಸಿದ ಪಾಪಗಳನ್ನು ನಾಶಮಾಡಿದ, ವಿಶ್ವದ ಎಲ್ಲ ಜನರನ್ನೂ ಉದ್ಧರಿಸುವ ಯಮುನೆಗೆ ಜಯವಾಗಲಿ. ಭಯನಾಶಿನಿ, ಸಂಕಟನಾಶಿನಿ-ನನ್ನನ್ನು ಪಾವನಗೊಳಿಸು.

**ಅತಿವಿಪದಂಬುಧಿಮಗ್ನಜನಂ ಭವತಾಪಶತಾಕುಲಮಾನಸಕಂ**
**ಗತಿಮತಿಹೀನಮಶೇಷಭಯಾಕುಲಮಾಗತಪಾದಸರೋಜಯುಗಮ್।**
**ಋಣಭಯಭೀತಿಮನಿಷ್ಕೃತಿಪಾತಕಕೋಟಿಶತಾಯುತಪುಂಜತರಂ**
**ಜಯ ಯಮುನೇ ಜಯ ಭೀತಿನಿವಾರಿಣಿ ಸಂಕಟನಾಶಿನಿ ಪಾವಯ ಮಾಮ್ ॥೪॥**

ಅತಿಯಾದ ವಿಪತ್ತೆಂಬ ಸಮುದ್ರದಲ್ಲಿ ಮುಳುಗಿದ, ನೂರಾರು ಭವತಾಪಗಳಿಂದ ತುಂಬಿದ ಮನಸ್ಸುಳ್ಳ, ನೆಲೆಯೂ ವಿವೇಕ ಬುದ್ಧಿಯೂ ಇಲ್ಲದ, ಸಾಲದ ಭೀತಿ ಹಾಗೂ ಇತರ ಎಲ್ಲಾ ವಿಧದ ಭಯಗಳಿಂದ ಕೂಡಿರುವ, ಪರಿಹಾರ ಪ್ರಾಯಶ್ಚಿತ್ತವೇ ಇಲ್ಲದ ನೂರಾರು ಕೋಟಿ ಪಾಪಗಳ ರಾಶಿಯುಳ್ಳ, ಆದರೆ ನಿನ್ನ ಪಾದಕಮಲವನ್ನಾಶ್ರಯಿಸಿ ನಿನ್ನ ಬಳಿಗೆ ಬಂದಿರುವ ನನ್ನನ್ನು ಭಯನಿವಾರಣೆಯೂ ಸಂಕಟನಾಶಿನಿಯೂ ಆದ ಯಮುನೆ, ಪವಿತ್ರನನ್ನಾಗಿ ಮಾಡು. ಜಯ ಯಮುನೆ.

ಸೂಕ್ತಿಪ್ರಭ

## ಫ್ರೆಂಚ್ ಸೂಕ್ತಿಗಳು

ಪದೇ ಪದೇ ಪ್ರಶ್ನಿಸುವುದೇ ಅರಿವಿನ ರಹಸ್ಯ. ಸಂದೇಹದಿಂದ ಪ್ರಶ್ನೆಗಳು ಏಳುವವು. ಪ್ರಶ್ನಿಸುವುದರಿಂದ ನಾವು ಸತ್ಯವನ್ನು ಕಾಣುವೆವು.

— ಪೀಟರ್ ಅಬೆಲಾರ್ಡ್

ದುಷ್ಟಕಾರ್ಯಗಳನ್ನು ಸಹಜವಾಗಿ, ಪ್ರಯತ್ನವಿಲ್ಲದೆ, ಕ್ರೌರ್ಯದಿಂದ ಮಾಡಲಾಗುತ್ತದೆ. ಆದರೆ ಸತ್ಕಾರ್ಯಗಳು ಯಾವಾಗಲೂ ಕಲೆಯಿಂದ ಉತ್ಪನ್ನವಾಗುವವು.

— ಚಾರ್ಲ್ಸ್ ಬುಡ್ಲೇರ್

ನೀರಿನ ಬಳಿ ನೆಟ್ಟ ಗಿಡದಂತೆ ನೀನು. ಸರಿಯಾದ ಋತುವಿನಲ್ಲಿ ಮಾತ್ರ ಅದು ಹಣ್ಣು ಬಿಡುವುದು. ಅದನ್ನು ಗಾಳಿ ಹೆಚ್ಚು ಅಲುಗಾಡಿಸಿದಷ್ಟೂ ಅದು ಇನ್ನಷ್ಟು ಆಳವಾಗಿ ನೆಲದಲ್ಲಿ ಬೇರೂರುವುದು.

— ಮಾರ್ಗರೆಟ್ ಮೇರಿ ಅಲಕಾಕ್

ದುಃಖಕ್ಕೆ ಹೆದರುವವನು, ತಾನು ಹೆದರುವ ಆ ದುಃಖವನ್ನು ಈಗಾಗಲೇ ಹೊಂದಿರುವನು.

— ಲಾ ಫೊಂಟೇನ್

ಅರಿಯಬೇಕಾಗಿರುವ ಎಲ್ಲವನ್ನೂ ನಾವು ಅರಿಯಲಾರೆವು ಎಂದಿರುವಾಗ, ಎಲ್ಲದರ ಬಗೆಗೂ ಒಂದಿಷ್ಟನ್ನಾದರೂ ನಾವು ಅರಿತುಕೊಳ್ಳಬೇಕು.

— ಬ್ಲೇಸ್ ಪಾಸ್ಕಲ್